ಜಾಹೀರಾತು

# ಅಧಿಕ ರಕ್ತಸ್ರಾವಕ್ಕೆ ಮಿರೇನ ಪರಿಹಾರ!



**ಮ** ಮಹಿಳೆಯರಲ್ಲಿ ಗರ್ಭಕೋಶ ಸಮಸ್ಯೆ ಸಾಮಾನ್ಯವಾಗಿದೆ. ಗರ್ಭಕೋಶ ಸಮಸ್ಯೆಯ ಆಧಾರ ಮೇಲೆ ವಿವಿಧ ರೀತಿಯ ಚಿಕಿತ್ಸೆಗಳು ಇವೆ. ಮಿರೇನ ಗರ್ಭಕೋಶ ಸಮಸ್ಯೆಗೆ ಪರಿಹಾರ ಒದಗಿಸುವ ನವೀನ ಚಿಕಿತ್ಸೆಯಾಗಿದೆ.

### ಮಿರೇನ ಎಂದರೇನು?

ಮಿರೇನ ಎಂದರೆ ಇದು 'ಟಿ' ಆಕಾರದ ಒಂದು ಪ್ಲಾಸ್ಟಿಕ್ ಉಪಕರಣವನ್ನು ಗರ್ಭಕೋಶದ ಒಳಗೆ ಸೇರಿಸಲಾಗುತ್ತದೆ. ಈ ಉಪಕರಣ ಲೆವೆನೂರ್‌ಜೆಸ್ಟ್ರೆಲ್ ಹಾರ್ಮೋನ್ ಹೊಂದಿರುತ್ತದೆ.

### ಇದನ್ನು ವೈದ್ಯರು ಹೇಗೆ ಅಳವಡಿಸುತ್ತಾರೆ?

ಈ ಉಪಕರಣ ಪ್ರತಿದಿನ ಅಗತ್ಯವಾದ ಹಾರ್ಮೋನ್‌ನ್ನು ಗರ್ಭಕೋಶಕ್ಕೆ ಹರಿಸುತ್ತದೆ. ಈ ಉಪಕರಣದ ಕೆಳಭಾಗದಲ್ಲಿ ಪ್ಲಾಸ್ಟಿಕ್ ಅಥವಾ ನೈಲಾನ್ ದಾರವನ್ನು ಹೊಂದಿರುತ್ತದೆ. ಇದು ಉಪಕರಣ ಜಾರಿದೆಯೇ? ಇಲ್ಲವೇ ಎಂಬುದನ್ನು ಪರೀಕ್ಷಿಸಲು ನೆರವಾಗುತ್ತದೆ.

### ಇದು ಎಷ್ಟು ಕಾಲ ಕಾರ್ಯನಿರ್ವಹಿಸುತ್ತದೆ?

ಸರಿಯಾದ ಸ್ಥಳದಲ್ಲಿದೆಯೋ, ಜಾರಿಯಿದೆಯೋ? ಎಂಬುದರ ಪತ್ತೆ ಜೊತೆಗೆ ನೇತಾಡುವ ದಾರದಿಂದ ಉಪಕರಣವನ್ನು ಸುಲಭವಾಗಿ ತೆಗೆಯಬಹುದು. ಒಮ್ಮೆ ಈ ಮಿರೇನಾ ಉಪಕರಣ ಅಳವಡಿಸಿದೆ. ಅದು ಭರ್ತಿ ಐದು ವರ್ಷ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.

### ಗರ್ಭಕೋಶದಿಂದಾಗುವ ಯಾವ, ಯಾವ ಸಮಸ್ಯೆಗಳಿಗೆ ಇದು ಸೂಕ್ತ?

ಈ ಮಿರೇನ ಉಪಕರಣವನ್ನು ಹಲವು ಸಂದರ್ಭಗಳಲ್ಲಿ ಬಳಸಬಹುದು.

ಎ) ಎಂಡೋಮೆಟ್ರಿಯೋಸಿಸ್

ಬಿ) ಅಧಿಕ ರಕ್ತಸ್ರಾವ

ಸಿ) ಅಡಿನೋಮೈಯೋಸಿಸ್

ನೋವು ಜಾಸ್ತಿಯಾದ ಸಂದರ್ಭದಲ್ಲೂ ಮಿರೇನ ಬಳಸಬಹುದು. ಅನಿಮಿಯಾ ತಡೆಯಲು, ಮುಟ್ಟಿನ ಸಂದರ್ಭದಲ್ಲಿ ಅಧಿಕ ಸ್ರಾವ ನಿಯಂತ್ರಿಸಲು, ಕೆಲ ಪ್ರಕರಣಗಳಲ್ಲಿ ಹಿಸ್ಟೇರಿರೆಕ್ಟಮಿ ತಡೆಯಲು ಮಿರೇನ ಬಳಸಬಹುದಾಗಿದೆ. ಈ ಮಿರೇನ ಕಾಪರ್-ಟಿ ಮಾದರಿಯಲ್ಲಿ ಅಳವಡಿಸಲಾಗುತ್ತದೆ. ಆದರೆ ತಜ್ಞ ವೈದ್ಯರಿಂದ ಇದನ್ನು ಅಳವಡಿಸಿಕೊಳ್ಳುವುದು ಒಳ್ಳೆಯದು ಈ ಮಿರೇನವನ್ನು ಮುಟ್ಟಿನ 5 ರಿಂದ 7 ದಿನದ ಅವಧಿಯಲ್ಲಿ ಅಳವಡಿಸುವುದು ಸೂಕ್ತ. ಈ ಉಪಕರಣ ಹಾರ್ಮೋನ್‌ನ್ನು ಸಣ್ಣ ಪ್ರಮಾಣದಲ್ಲಿ ಪ್ರತಿದಿನವೂ ಬಿಡುಗಡೆ ಮಾಡುತ್ತದೆ. ಈ ಹಾರ್ಮೋನ್ ಗರ್ಭ ಧರಿಸುವುದನ್ನು ತಡೆಯುವ ಜೊತೆಗೆ, ಅಧಿಕ ಸ್ರಾವವನ್ನು ತಡೆಯುತ್ತದೆ. ಈ ಹಾರ್ಮೋನ್ ಗರ್ಭ ಕೋಶದ ಪದರವನ್ನು ತೆಳುವಾಗಿಸುವ ಮೂಲಕ ರಕ್ತ ನಷ್ಟವನ್ನು ತಡೆಯುತ್ತದೆ.

### ಯಾವ, ಯಾವ ಮಹಿಳೆಯರಲ್ಲಿ ಮಿರೇನ ನಿಷಿದ್ಧ?

ಮಿರೇನ ಅಳವಡಿಕೆಯು ಗರ್ಭಿಣಿ ಮಹಿಳೆಯರಿಗೆ, ಅನಿಯಮಿತ ಸ್ರಾವದ ಸಮಸ್ಯೆ ಹೊಂದಿರುವವರಿಗೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲದ ಸರ್ವಿಕಲ್ ಅಥವಾ ಗರ್ಭಕೋಶದ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹೊಂದಿರುವವರಿಗೆ ಈ ಮಿರೇನ ಅಳವಡಿಕೆ ನಿಷಿದ್ಧ. ಇದರ ಜೊತೆಗೆ ಲಿವರ್ ಕಾಯಿಲೆ ಅಥವಾ ಗಡ್ಡೆ ಸಮಸ್ಯೆ ಇರುವವರಿಗೂ ಮತ್ತು Pelvic Infection ಇರುವಾಗ ಇದನ್ನು ಅಳವಡಿಸಬಾರದು.



### ಇದನ್ನು ಅಳವಡಿಸಿದ ಮಹಿಳೆಯರು ಮತ್ತು ಮಗು ಪಡೆಯಲು ಸಾಧ್ಯವೇ?

ಈ ಮಿರೇನ ಬಳಕೆ ಬಹಳ ಅನುಕೂಲವಾಗಿದ್ದು, ಬೇಕಾದಾಗ ಮಗು ಪಡೆಯಲು ಇದು ಪರಿಣಾಮಕಾರಿಯಾಗಿದೆ. ಈ ಉಪಕರಣ ಬಳಕೆಯಿಂದ ಮುಟ್ಟಾಗುವ ಕ್ರಿಯೆ ಸಲೀಸು ಎನ್ನಿಸುತ್ತದೆ. ಈ ಉಪಕರಣ ಅಳವಡಿಸಿಕೊಂಡ ನಂತರದ 3 ರಿಂದ 6 ತಿಂಗಳು ಅನಿಯಂತ್ರಿತ ಸ್ರಾವ ಸಾಮಾನ್ಯ. ಕೆಲವೊಂದು ಸಂದರ್ಭದಲ್ಲಿ ಈ ಉಪಕರಣ ಜಾರುತ್ತದೆ. ಹಾಗಾಗಿ ತಪಾಸಣೆ ಅಗತ್ಯ. ಈ ಉಪಕರಣ ಅಳವಡಿಕೆ ತಕ್ಷಣ ಕೆಲ ಮಹಿಳೆಯರಿಗೆ ನೋವು ಆಗಬಹುದು. ಏನೋ ಒಂದು ರೀತಿಯ ಅನಾನುಕೂಲದ ಭಾವನೆ ಮೂಡಬಹುದು. ಆದರೆ ಕಾಲ ನಂತರ ಇದು ಪರಿಣಾಮಕಾರಿಯಾಗಿ 5 ವರ್ಷ ಇದು ಕೆಲಸ ಮಾಡುತ್ತದೆ.

**– ಡಾ|| ಬಿ. ರಮೇಶ್**

## ಅಧಿಕ ರಕ್ತಸ್ರಾವ ಹಾಗೂ ಮಿರೇನ ಅಳವಡಿಕೆಯ ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ ಸಂಪರ್ಕಿಸಿ:

## ಅಲ್ಟಿಯಸ್ ಹಾಸ್ಪಿಟಲ್

( Unit of Dr. Ramesh Hospital)

**ಹೈಟೆಕ್ ಲ್ಯಾಪ್ರೋಸ್ಕೋಪಿ & ಗೈನೋಕಾಲಜಿ ಹಾಸ್ಪಿಟಲ್**

**ರಾಜಾಜಿನಗರ:**
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು-10.
ಫೋ: 080-23151873 Mob: 9900031842

**ರಾಜರಾಜೇಶ್ವರಿನಗರ:**
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಶಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು-98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com